ಶ್ರೀಕೃಷ್ಣ ಸ್ಮರಣೆ

# ಹರಿದಾಸರು ಕೊಂಡಾಡಿದ ಶ್ರೀಕೃಷ್ಣ

ಸಂತ ಭದ್ರಗಿರಿ ಅಚ್ಯುತದಾಸರು

ಅಪರೋಕ್ಷಿಗಳಾದ ದಾಸವರೇಣ್ಯರು ಶ್ರೀಕೃಷ್ಣನ ಮಹಿಮೆಯನ್ನು ಸುಲಲಿತ ಭಾಷೆಯಲ್ಲಿ ಮುಗ್ಧರಿಗೂ ಅರ್ಥವಾಗುವ ತಿಳಿಗನ್ನಡದಲ್ಲಿ ಅನೇಕ ಗೀತೆಗಳಲ್ಲಿ ತಿಳಿಯಹೇಳಿದ್ದಾರೆ. ಅವುಗಳಲ್ಲಿ ಕೆಲವನ್ನು ನೋಡೋಣ:

ಅಂಬೆಗಾಲಿಡುತ್ತಾ ಬರುವ ಶ್ರೀಕೃಷ್ಣ–ಬಲರಾಮರ ದಿವ್ಯ ಲೀಲೆಗಳನ್ನು ದಾಸರು ಮನಮುಟ್ಟುವಂತೆ ವರ್ಣಿಸುತ್ತಾರೆ. ಅಂಬೆಗಾಲಿಡುತ್ತಿದ್ದ ಕೃಷ್ಣ ಬಲರಾಮರು ಈಗ ನಡಿಗೆ ಕಲಿತರು; ಸಮಾನ ವಯಸ್ಸಿನ ಬಾಲಕರೊಡನೆ ಆಟೋಟದಲ್ಲಿ ನಿಷ್ಣಾತರಾದರು. ಅವರು ನಾನಾ ಪಶುಪಕ್ಷಿಗಳ ಸ್ವರಗಳನ್ನು ಅನುಕರಿಸಿ ಅಣಕವಾಡುವುದನ್ನೂ ಕಲಿತರು ಎಂದು ದಾಸರು ಹೀಗೆ ವರ್ಣಿಸುತ್ತಾರೆ:

**ಕೋಗಿಲೆಯಂತೆ ಕೂಗುವೆಯೊಮ್ಮೆ ।**
**ಗಿಳಿಯಂತೆ ಮಾತನಾಡುವೆಯೊಮ್ಮೆ ।**
**ದುಂಬಿಯಂತೆ ಹಾಡುವೆಯೊಮ್ಮೆ ।**
**ನವಿಲಿನಂತೆ ನಲಿದಾಡುವೆಯೊಮ್ಮೆ ।**

ಶ್ರೀಕೃಷ್ಣನಿಗೆ ಈಗ ಮೂರು ವರುಷ ತುಂಬಿತು. ಹೊಸ್ತಿಲು ದಾಟಿ ಅಂಗಳಕ್ಕಿಳಿದ ರಂಗನು ಗೋಪರೊಡನೆ ಬೀದಿಗಿಳಿಯುತ್ತಾನೆ. "ಆಡಿದ ರಂಗನಾಡಿದ" ಎಂಬ ಕೀರ್ತನೆಯಲ್ಲಿ ಪುರಂದರದಾಸರು ಅದನ್ನು ಹೀಗೆ ವರ್ಣಿಸುತ್ತಾರೆ.

**ಮೂರು ವರುಷಗಳು ಮುದ್ದು ರಂಗಯ್ಯಗೆ ।**
**ಮೀರಿದ ಕೆಂದುಟಿ ಜೊಲ್ಲುಬಾಯಿ ।**
**ವಾರಿಗೆ ಮಕ್ಕಳ ಕೂಡ ಬೀದಿಯಲಿ ।**
**ವಾರಿಜನಾಭನು ನಲಿಯುತಿರ್ದ ।**

ಮಣ್ಣನ್ನು ಮೈಗೆ, ತಲೆಗೆ ಮೆತ್ತಿಕೊಂಡು ಮಣ್ಣಿನಲ್ಲಾಡುವ ಮಗನನ್ನು ಕರೆಯುವ ಯಶೋದೆಯ ಮಾತುಗಳನ್ನು ಶ್ರೀ ವಾದಿರಾಜ ಯತಿಗಳ ಮಾತುಗಳಲ್ಲೇ ಕೇಳಬೇಕು:

**ಬಾರೋ ಮುರಾರಿ ಬಾಲಕ ಶೌರಿ ॥ಪ॥**
**ಸಾರ ವಿಚಾರಿ ಸಂತೋಷಕಾರಿ ॥ಅ.ಪ॥**

**ಆಟಸಾಕೇಳೋ ಮೈಯೆಲ್ಲ ಧೂಳೋ ।**
**ಊಟ ಮಾಡೇಳೋ ಕೃಷ್ಣ ಕೃಪಾಳೋ ॥**

**ಆಟ ಸಾಕೇಳೋ, ಮೈಯೆಲ್ಲಾ ಧೂಳೋ, ಊಟ ಮಾಡೇಳೋ**– ಎಂಬ ಸವಿಯಾದ ಕನ್ನಡದ ಈ ಸರಳ ಮನೆಮಾತುಗಳು ಎಷ್ಟು ಮುದ್ದಾಗಿವೆ!

*ಲೇಖಕರು ಕರ್ನಾಟಕದ ಪ್ರಸಿದ್ಧ ಹರಿಕಥಾ ಅಧ್ವರ್ಯುಗಳು; ದಾಸ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವುಳ್ಳವರು, ಉತ್ತಮ ಹಾಡುಗಾರರು ಕೂಡ.*

ಶ್ರೀ ಪುರಂದರದಾಸರು ತಮ್ಮ ಒಂದು ಕೀರ್ತನೆಯಲ್ಲಿ ಹೀಗೆ ಬಣ್ಣಿಸುತ್ತಾರೆ: ಕೃಷ್ಣನು ಮಣ್ಣಿನಲ್ಲಿ ಆಟವಾಡಿ, ಮೈಗೆ ಮಣ್ಣನ್ನು ಮೆತ್ತಿಕೊಂಡು ಅವನ್ನೇ ತಿನ್ನಲು ಪ್ರಯತ್ನಿಸುತ್ತಿರುವುದನ್ನು ಕಂಡ ಯಶೋದೆಯು, "ಕಂದಾ! ಮಣ್ಣು ತಿನ್ನಬೇಡಾ! ತಿಂದರೆ ಹೊಟ್ಟೆ ನೋಯುತ್ತದೆ. ಇಗೋ! ಈ ಹಾಲು ಕುಡಿದು ಮಲಗು! ತುಂಬಾ ತಂಟೆ, ಲೂಟಿ ಮಾಡಬೇಡ! ಬೂಚಿ ಬಂದು ನಿನ್ನನ್ನು ಎತ್ತಿಕೊಂಡು ಹೋಗುತ್ತದೆ ('ಬೂಚಿ' ಎಂದರೆ ಗುಮ್ಮ, ಮಕ್ಕಳಿಗೆ ಹೆದರಿಸಲು ಹೇಳುವ ಒಂದು ಕಾಲ್ಪನಿಕ ಪ್ರಾಣಿ. ಗೂಬೆಗೂ ಗುಮ್ಮ ಎನ್ನುತ್ತಾರೆ.) 'ಚಾಚಿ' ಕುಡಿದು ಸುಮ್ಮನೇ ಪಾಚಿಕೋ ಎನ್ನುತ್ತಾಳೆ (ಮಕ್ಕಳ ಭಾಷೆಯಲ್ಲಿ ಚಾಚಿ ಎಂದರೆ ಹಾಲು, ಪಾಚಿಕೊಳ್ಳುವುದೆಂದರೆ ಮಲಗಿಕೊಳ್ಳುವುದು).



ದಾಸರ ಈ ಕೀರ್ತನೆಯಲ್ಲಿ ತಮ್ಮ ಒಡೆಯನಾದ ಸಾಕ್ಷಾತ್ ನಾರಾಯಣನಾದ ಶ್ರೀಕೃಷ್ಣನ ದರ್ಶನ ಪಡೆಯಲು ಚತುರ್ಮುಖ ಬ್ರಹ್ಮ, ತ್ರಿನೇತ್ರನಾದ ರುದ್ರ, ಮೈಯೆಲ್ಲಾ ಕಣ್ಣುಳ್ಳ ಇಂದ್ರ, ಆರು ಮುಖದ ಕಾರ್ತಿಕೇಯ, ಹಾಗೆಯೇ ಆಂಜನೇಯ ಇವರೆಲ್ಲಾ ಬರುತ್ತಾರೆ. ಅವರೆಲ್ಲಾ ನಿನ್ನನ್ನು ಮತ್ತೆ ಎಳೆದುಕೊಂಡು ವೈಕುಂಠದ ನಿನ್ನ ನಿಜಪುರಕ್ಕೆ ಒಯ್ದಾರು ಎನ್ನುತ್ತಾಳೆ ಯಶೋದೆ. ದಾಸರು ಇಲ್ಲಿ ಮಕ್ಕಳಿಗೆ ಭಯ ಉಂಟುಮಾಡಲು ನಾಲ್ಕು ಮುಖ, ಮೂರು ಕಣ್ಣು, ಮೈಯೆಲ್ಲಾ ಕಣ್ಣು, ಆರುಮುಖ, ಮರದ ಮೇಲೆ ಇರುವವ ಮುಂತಾಗಿ ಬಹಳ ಚಮತ್ಕಾರವಾಗಿ ಹೇಳುತ್ತಾರೆ. ಆ ಕೀರ್ತನೆ ಹೀಗಿದೆ:

**ಬೂಚಿ ಬಂದಿದೆ । ರಂಗ । ಬೂಚಿ ಬಂದಿದೆ ॥ಪ॥**
**ಚಾಚಿ ಕುಡಿದು ಸುಮ್ಮನೇ ನೀ ।**
**ಪಾಚಿಕೊಳ್ಳೋ ಕೃಷ್ಣಯ್ಯಾ ॥ಅ.ಪ॥**

ಈ ಕೀರ್ತನೆಯ ಸಾಹಿತ್ಯದ ಅರ್ಥ ಹೀಗಿದೆ: ಯಶೋದೆ ಕೃಷ್ಣನಿಗೆ ಹೀಗೆ ಹೇಳುತ್ತಾಳೆ: "ಕೃಷ್ಣಾ! ಆ ನಾಕುಮುಖದ ಬೂಚಿ ಮಕ್ಕಳನ್ನು ಎಳೆದುಕೊಂಡು ಹೋಗಿ ಬಹಳ ಹಿಂಸೆ ಕೊಡುತ್ತದೆ. ಇನ್ನೊಂದು ನೋಡು, ಮೂರು ಕಣ್ಣಿನ ಬೂಚಿ, ದ್ವಾರದಲ್ಲಿ ನಿಂತಿದೆ. ಅದು

ಪೋರನನ್ನು ಒಯ್ಯುತ್ತದೆ. ಮತ್ತೊಂದು ಮೈಯೆಲ್ಲಾ ಕಣ್ಣುಳ್ಳ ಚಂದದ ಮೂತಿಯ ಬೂಚಿ ಮಕ್ಕಳನ್ನು ಹೆದರಿಸಿ ಕೊಂಡೊಯ್ಯುತ್ತದೆ. ಇನ್ನೊಂದು ಆರು ಮುಖದ ಬೂಚಿ ಆಗಾಗ ಅಳುವ ಮಕ್ಕಳನ್ನು ಅವರ ತಾಯಿಯಿಂದ ಬಿಡಿಸಿಕೊಂಡು ದೂರಕ್ಕೆ ಕೊಂಡೊಯ್ಯುತ್ತದೆ. ಕಪ್ಪಗಿನ ಕರಾಳ ಮೂತಿಯ ಬೂಚಿ ತರಳರನ್ನು ಎಳೆದೊಯ್ದು ಪುರಂದರವಿಠಲನಿಗೆ ಒಪ್ಪಿಸುತ್ತದೆ."

ಇದನ್ನೆಲ್ಲಾ ಕೇಳಿದ ಕೃಷ್ಣನು ಬೆದರಿದಂತೆ ನಟಿಸುತ್ತಾನೆ. ಯಶೋದೆಯು "ಕೃಷ್ಣಾ! ಏಳು! ಬೇಗ ಏಳು, ಬೂಚಿ ಗುಮ್ಮ ಬರುತ್ತದೆ" ಎನ್ನುತ್ತಿರುವಂತೆ, ಕೃಷ್ಣನು ಒಂದು ಹಿಡಿ ಮಣ್ಣೆತ್ತಿಕೊಂಡು. ಬಾಯಿಯಲ್ಲಿ ಹಾಕಿಕೊಳ್ಳುತ್ತಾನೆ. ಆಗ ಯಶೋದೆಯು ಸಿಟ್ಟಿನಿಂದ ನಿನಗೊಂದು ಪೆಟ್ಟುಕೊಡುವೆ ಎನ್ನುತ್ತಾಳೆ. ಆಗ ಶ್ರೀಕೃಷ್ಣನು–

**ಅಮ್ಮಯ್ಯ ಕೇಳೆಲೆ ಬಾಯಲಿ ಮಣ್ಣಿಲ್ಲಾ।**
**ಗುಮ್ಮನು ಬರಬೇಡಾ ಸುಮ್ಮನೆ ಇರುತ್ತೇನೆ॥** ಎನ್ನುತ್ತಾನೆ.

"ಅಮ್ಮಾ! ಅವರೆಲ್ಲಾ ಸುಳ್ಳು ಹೇಳುತ್ತಾರೆ. ನಾನು ಮಣ್ಣು ತಿಂದಿಲ್ಲ. ಅವರ ಮಾತೇ ನಿಜವೆಂದು ನಿನಗೆ ತೋರಿದರೆ, ನನ್ನ ಬಾಯಲ್ಲಿ ನೋಡು" ಎಂದು ಕೃಷ್ಣ ಹೇಳಲು ಹೊರಟಾಗ, "ನೋಡೋಣ, ಬಾಯಿ ತೆರೆ" ಎಂದು ಯಶೋದೆ ಬಾಯೊಳಗೆ ಇಣುಕಿ ನೋಡುತ್ತಾಳೆ. ಅಲ್ಲಿ ಅವಳು ಕಂಡದ್ದು ಏನು?

**ಬಾಯೊಳು ಬ್ರಹ್ಮಾಂಡವನು ತೋರಿದ ।**
**ತಾಯ್ಗೆ ವಿಶ್ವನಾಯಕನು ॥ಪ॥**

**ಭೂಮಿ ಆಕಾಶ ಗ್ರಹತಾರೆಗಳು ।**
**ಕಾಣೆಪವನೇಕ ರವಿಚಂದ್ರರುಗಳು ॥**

**ಚೆಂಡುಬುಗುರಿಯಂತುರುಳುವಜಾಂಡಾ ।**
**ಕೆಂಡಕಾರುತಿಹ ನಭವದು ಭಾಂಡಾ ॥**

**ನೀಲಮೇಘನ ಲೀಲೆಯನೆಲ್ಲಾ ।**
**ಮೂಲನಾರಾಯಣನೋರ್ವನೆ ಬಲ್ಲ ॥**

ಯಶೋದೆಗೆ ಸ್ಥಾವರ ಜಂಗಮಾತ್ಮಕವಾದ ಸಮಸ್ತ ಬ್ರಹ್ಮಾಂಡಗಳು ಏಕಕಾಲದಲ್ಲಿ ಕಾಣಿಸಿದವು. ಆಕಾಶ, ದಿಕ್ಕುಗಳು, ಸಮುದ್ರ, ದ್ವೀಪ, ನದಿನದಗಳು, ಪರ್ವತಗಳು, ಭೂಮಂಡಲ, ವಾಯುಮಂಡಲ, ಸೂರ್ಯ ಚಂದ್ರ ಅಗ್ನಿ, ನಕ್ಷತ್ರಗಳಿಂದ ತುಂಬಿದ ಜ್ಯೋತಿರ್ಮುಖ ತಾರಾಮಂಡಲ, ಆವರಣ ಜಲ, ಸ್ವರ್ಗ ಪಾತಾಳಾದಿ ಊರ್ಧ್ವ ಅಧೋಲೋಕಗಳು, ಇಂದ್ರಿಯ ಮನಸ್ಸು ಶಬ್ದಾದಿ ವಿಷಯಗಳು, ಸತ್ತ್ವಾದಿ ಗುಣಗಳು, ಸಕಲ ಜೀವರಾಶಿಗಳು, ಕಾಲ ಗುಣ ಕರ್ಮ ಸಂಸ್ಕಾರಗಳಿಂದ ಕೂಡಿದ ವಿಧ ವಿಧ ವಿಚಿತ್ರ ಜಗತ್ತು – ಇವೆಲ್ಲವೂ ಶ್ರೀಕೃಷ್ಣನ ಬಾಯಿಯಲ್ಲಿ ಕಾಣಿಸಿದುದು ಮಾತ್ರವಲ್ಲ, ತನ್ನ ನಿವಾಸಸ್ಥಾನವಾದ ಗೋಕುಲ, ಅಲ್ಲಿ ಸಮೀಪದಲ್ಲೇ ಬಾಯಿ ತೆರೆದಿರುವ ಮುದ್ದು ಮಗುವನ್ನೂ ಅಲ್ಲಿ ಕಂಡು, ಯಶೋದೆ ಏನೂ ತೋಚದೇ ಸ್ತಬ್ಧಳಾಗಿ ನಿಂತು ಯೋಚಿಸಿದಳು:

"ಆಹಾ! ಏನಿದಾಶ್ಚರ್ಯ? ಈ ಸಣ್ಣ ಬಾಲಕನ ಬಾಯಿಯಲ್ಲಿ ಸಮಸ್ತ ಬ್ರಹ್ಮಾಂಡವನ್ನು ನಾನು ನೋಡುತ್ತಿರುವೆನಲ್ಲಾ! ಇದೇನು ಸ್ವಪ್ನವೋ? ಮಾಯೆಯೋ? ಅಥವಾ ನನ್ನ ಬುದ್ಧಿಯ ಭ್ರಮೆಯೋ? ಬಹಳ ಹೊತ್ತಿನ ತನಕ ಕಾಣಿಸುತ್ತಿರುವ ಇದು ಸ್ವಪ್ನವಲ್ಲ, ಬಾಲಕನ ಸಹಜ ಶಕ್ತಿ ಎನ್ನೋಣವೇ? ಹೇಗೆ ಚಿಂತಿಸಿದರೂ ಹೊಳೆಯುವುದಿಲ್ಲವಲ್ಲ!" ಹೀಗೆ ಯೋಚಿಸುತ್ತ, ಯಶೋದೆಯು ತಾನು ಮಾಡಿದ ಪುಣ್ಯವಿಶೇಷದಿಂದಲೇ ತನಗೆ ಈ ದರ್ಶನವನ್ನು ಭಗವಂತ ಮಾಡಿಸಿದನೆಂದು, ಆತನ ಪಾದಕ್ಕೆ ವಂದಿಸಿದಳು. ಈ ಪ್ರಸಂಗವನ್ನು ಈ ಮುಂದಿನ ಭಾಮಿನೀ ಷಟ್ಪದಿಯ ರಚನೆ ವರ್ಣಿಸುತ್ತದೆ:

ಇಂತು ಬಹುವಿಧ ಚಿಂತಿಸುತ ಸತಿ ।
ಕಂತುಪಿತನನಂತಲೀಲೆಯ ।
ಅಂತವನು ಬಲ್ಲವರು ಭುವಿಯೊಳಗಿಲ್ಲವಿದು ಸತ್ಯ ॥
ಭ್ರಾಂತಿಯಲ್ಲವು ಚಿಂತಿಪೊಡೆ ಭಗ
ವಂತನಿಂ ಹೊರಹೊಮ್ಮಿದುದು ಜಗ
ಪಿಂತೆ ಮಾಡಿದ ಪುಣ್ಯವೆನುತೆರಗಿದಳು ಹರಿಪದಕೆ ॥

ಶ್ರೀಕೃಷ್ಣನೇ ಪರಮಪುರುಷ, 'ಶ್ರೀಹರಿ' ಎಂಬ ಜ್ಞಾನ ಆಕೆಗೆ ಉಂಟಾಗುತ್ತದೆ. ಕೊಂಚಕಾಲ ಪ್ರಜ್ಞೆ ತಪ್ಪಿದಂತಾಗಲು, ಶ್ರೀಹರಿಯು ತನ್ನ ಮಾಯೆಯಿಂದ ಆಕೆಗೆ ಶ್ರೀಕೃಷ್ಣ ತನ್ನ ಮಗನೇ ಎಂಬ ಮೋಹವನ್ನುಂಟುಮಾಡಿ ಹಿಂದಿನ ಘಟನೆಗಳನ್ನೆಲ್ಲ ಮರೆಯುವಂತೆ ಮಾಡುತ್ತಾನೆ.

ಆಗ ಯಶೋದೆಯು, "ಬಾ ಕಂದಾ, ಬಾ" ಎಂಬುದಾಗಿ ಶ್ರೀಕೃಷ್ಣನನ್ನು ಸೆಳೆದು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಮುದ್ದಾಡಿದಳು. ಇಂತಹ ಯಶೋದೆಯ ಭಾಗ್ಯವನ್ನು ಪುರಂದರದಾಸರು ವರ್ಣಿಸುವುದನ್ನು ಅವರ ಮಾತುಗಳಲ್ಲೇ ಕೇಳೋಣ:

ಅನಂತ ವೇದಸಮೂಹಗಳಿಂದಲಿ ।
ಅಜಾದಿ ಸುರರು ಅರಸಲೇತಕ್ಕಿನ್ನು ।
ಆನಂದ ಯಶೋದೆಯರ ಮನೆಯಲ್ಲಿ ।
ವೃಂದಾವನದಿ ಕಾಣಿಸಿಕೊಂಡನವ್ವಾ !
ನಂದನಂದನ ಕಂದ ಪುರಂದರವಿಠಲ ।
ಪರದೇವತೆ ಈತನಲ್ಲವೇನವ್ವಾ ॥

ಎಲ್ಲ ವೇದಗಳೂ, ಪುರಾಣಗಳೂ ಯಾವನ ಮಹಿಮೆಯನ್ನು ಕೊಂಡಾಡುವವೋ ಅವನೇ ಶಕಟಮರ್ದನ ಶ್ರೀ ಪುರಂದರವಿಠಲ ಎಂದು ಇನ್ನೊಂದು ಉಗಾಭೋಗದಲ್ಲಿ ದಾಸರು ಹೇಳುತ್ತಾರೆ.

ಸಕಲ ಶ್ರುತಿ ಪುರಾಣಗಳೆಲ್ಲದಾವನ ಮಹಿಮೆ ।
ಸುಖಪೂರ್ಣ ಸುರವರಾರ್ಚಿತವಾದ ॥
ಶಕಟಮರ್ದನ ಶರದೇಂದುವಕ್ತ್ರ ।
ರುಕ್ಮಿಣೀರಮಣ ಪರಿಪೂರ್ಣ ನಮ್ಮ ಪುರಂದರವಿಠಲ ॥

ಯಶೋದೆಯು ಮುದ್ದುಕೃಷ್ಣನ ವದನದಲ್ಲಿ ತಾನು ಕಂಡ ಆಶ್ಚರ್ಯ ಆನಂದಗಳಿಂದೊಡಗೂಡಿದ ದಿವ್ಯ ದೃಶ್ಯವನ್ನು ಮತ್ತೆ ಮತ್ತೆ ಸ್ಮರಿಸುತ್ತಾ ಇರುತ್ತಾಳೆ. ಆಗ ಶ್ರೀಕೃಷ್ಣನು ಆಕೆಯನ್ನು ಮೋಹಕ್ಕೊಳಗಾಗಿಸಿ ತನ್ನ ಮಹಿಮೆಯನ್ನು ಮರೆಯುವಂತೆ ಮಾಡುತ್ತಾನೆ. ತೊದಲುತ್ತಾ ಎಡವುತ್ತಾ ಬಂದು "ನನ್ನನ್ನು ಎತ್ತಿಕೊ, ನನಗೆ ಬಹಳ ಹಸಿವು ಆಗುತ್ತಿದೆ" ಎನ್ನುತ್ತಾನೆ. ಈ ಸನ್ನಿವೇಶವನ್ನು ವರ್ಣಿಸುವ ಪ್ರಸನ್ನವೆಂಕಟದಾಸರು ಶ್ರೀಕೃಷ್ಣನು

ಹೇಗೆ ತೊದಲಿದನೆಂದು ವರ್ಣಿಸುವ ಕೀರ್ತನೆಯನ್ನು ಈಗ ನೋಡೋಣ:

ನಂಗನ್ನೆತ್ತಿಕೊ ಅಮ್ಮ! ಎತೋದೆ ಅಮ್ಮಾ!
ಬಲು ಒತ್ತು ಅತ್ತು ಬಂದೆನೆ! ಇತ್ತಿ ಅಮ್ಮಿ ತಿಂದೆನೆ॥

ತೊದಲು ನುಡಿಗಳ ಅರ್ಥ ಹೀಗಿದೆ: **ನಂಗನ್ನೆತ್ತಿಕೋ ಅಮ್ಮ** – ರಂಗನನ್ನು ಎತ್ತಿಕೋ ಅಮ್ಮ, **ಎತೋದೆ ಅಮ್ಮಾ** – ಯಶೋದೆಯಮ್ಮಾ, **ಬಲು ಒತ್ತು ಅತ್ತು ಬಂದೆನೇ** – ಬಹಳ ಹೊತ್ತು ಹಸಿದು ಬಂದಿದ್ದೇನೆ, **ತುತಿಬಾಯಿ ವಂಗ್ಯಾವೆ** – ತುಟಿ ಬಾಯಿ ಒಣಗಿವೆ. **ಬಿಸಿ ಆವು ವಾತತ್ತಿ ಬತ್ತಾವೆ** – ಬಿಸಿ ಹಾಲು ನನಗೆ ಓಕರಿಕೆ ಬರುತ್ತದೆ. **ಅತಿ ಆವು ಉಪ್ಪುಕಾಯಿ** – ಹಸಿಹಾಲು ಉಪ್ಪಿನಕಾಯಿ ಜೊತೆಗೆ ಕೊಡು. **ಉತ್ತತ್ತಿ ಬೆನ್ನಿ ತಿಂದೇನೆ** – ಒಣ ಖರ್ಜೂರ ಬೆಣ್ಣೆ ತಿನ್ನುತ್ತೇನೆ.... ಹೀಗೆ ಸಾಗುತ್ತದೆ ಈ ಗೀತೆ. ಮಗುವಿನ ಈ ತೊದಲಿನ ಮಾತಿಗೆ ಮರುಳಾದ ಯಶೋದೆ ಕೃಷ್ಣನನ್ನು ಎತ್ತಿ ಎದೆಗವಚಿಕೊಂಡಳಂತೆ.

ಶ್ರೀಕೃಷ್ಣನಿಗೆ ಯಶೋದೆಯು ಅನ್ನಪ್ರಾಶನ ಮಾಡಿಸಿದಳು.

ಅನ್ನವನುಣಿಸಿದರು । ಅನ್ನವನುಣಿಸಿದರು ।
ಘನ್ನಮಹಿಮಶಿಶು ರನ್ನ ರಮಾಪತಿಗೆ ॥ .......

ಅಪ್ರಾಕೃತಕಾಯನಾದ ಆನಂದದ ದೇಹದ ಆದಿಪುರುಷನಿಗೆ ಅನ್ನಪ್ರಾಶನ ಮಾಡಿಸಿ, ಮಂಗಳಾರತಿ ಬೆಳಗಿದ ಯಶೋದೆ ಅವನನ್ನು ರನ್ನದ ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಪಾಡಿದಳಂತೆ. ಶ್ರೀ ಪುರಂದರ ದಾಸರ ಬಹುಜನಪ್ರಿಯವಾದ ಈ ಜೋಗುಳದ ಹಾಡು ತುಂಬ ಸೊಗಸಾಗಿದೆ.

ಜೋ ಜೋ ಶ್ರೀಕೃಷ್ಣ ಪರಮಾನಂದ ।
ನಂದ ಗೋಪಿಯ ಕಂದ ಬಾಲ ಮುಕುಂದ ॥ .......

ಯಶೋದೆಯು ತನ್ನ ಜೋಗುಳದ ಮಂಜುಳ ಮಧುರಧ್ವನಿಯನ್ನು ಕೇಳುತ್ತಾ ಕಣ್ಣರಳಿಸಿ ತನ್ನನ್ನೇ ನೋಡುವ ಮುದ್ದು ಮೋಹನ ಕೃಷ್ಣನಿಗೆ ಶ್ರೀರಾಮನ ಕಥೆಯನ್ನು ಹೇಳುವಾಗ, ಕೃಷ್ಣನು ಹೂಂಗುಡುತ್ತಿದ್ದನಂತೆ.

**ಕತೆಯ ಕೇಳೆಲೆ ಕಂದ ಹುಂ, ರಘುಜನೆಂಬ ಹುಂ, ಸಕಾಂತಂ** ವನಸ್ಥಿತ ನಾದಂ, ಗುರು **ಪೇಳೆ ಹುಂ, ದಶಶಿರಂ ಕೊಂಡುಯ್ದನಾ** ರಾಮನಾ...

ಯಶೋದೆ ಕಥೆ ಹೇಳುತ್ತಿದ್ದಾಳೆ. ಕೃಷ್ಣನು 'ಹೂಂ' ಗುಡುತ್ತಿದ್ದಾನೆ. ಶ್ರೀಕೃಷ್ಣ! ಕಂದಾ! ನಿನಗೆ ಕಥೆ ಹೇಳುತ್ತೇನೆ ಕೇಳು!, **ಹುಂ;** ಪೂರ್ವಕಾಲದಲ್ಲಿ ಶ್ರೀರಾಮನೆಂಬವನು, **ಹುಂ;** ಪಿತೃವಾಕ್ಯ ಪರಿ ಪಾಲನೆಗೆ, **ಹುಂ;** ಪತ್ನಿ ಸೀತಾಸಹಿತ ಪಂಚವಟಿಯ ಅರಣ್ಯಕ್ಕೆ ಹೋದನು, **ಹುಂ;** ಅಲ್ಲಿ ಹತ್ತು ತಲೆಯ ರಾವಣನೆಂಬ ರಾಕ್ಷಸನು, **ಹುಂ.** ನಂತರ ಯಶೋದೆಯು ರಾವಣನು ಸೀತಾದೇವಿಯನ್ನು ಅಪಹರಿಸಿದ ಎಂದಾಗ, ಶ್ರೀಕೃಷ್ಣ ಪರಮಾತ್ಮನು ತನ್ನ ಪೂರ್ವಾವತಾರವನ್ನು ನೆನೆದು ಔಡುಗಚ್ಚಿ, ಹುಬ್ಬು ಗಂಟಿಕ್ಕಿ ಕೆಂಡಗಣ್ಣವನಾಗಿ ಕೋಪದಿಂದ ಹೂಂಕರಿಸಲು, ಯಶೋದೆ ಅದನ್ನು ಕಂಡು ಭಯಗೊಂಡಳಂತೆ.

ಶ್ರೀ ವಾದಿರಾಜ ಸ್ವಾಮಿಗಳು ತಮ್ಮ ಒಂದು ರಚನೆಯಲ್ಲಿ ಕೃಷ್ಣ ನಿದ್ದೆ ಮಾಡಿದ ಪ್ರಸಂಗವನ್ನು ಹೀಗೆ ಸೊಗಸಾಗಿ ನಿರೂಪಿಸಿದ್ದಾರೆ:

ಒಮ್ಮೆ ಯಶೋದೆಯು "ಕೃಷ್ಣ, ಸುಮ್ಮನೆ ನಿದ್ದೆ ಮಾಡು ಮಗನೆ" ಎನ್ನುತ್ತಾಳೆ. ಆಗ ಕೃಷ್ಣನು "ಯಾಕಮ್ಮಾ ನಿದ್ದೆ ಮಾಡಬೇಕು?" ಎಂದು ಕೇಳಿದಾಗ ಯಶೋದೆಯು "ನೀನು ತಿಂದದ್ದು ಅರಗಬೇಡವೇ?" ಎನ್ನುತ್ತಾಳೆ. ಲಯಕಾಲದಲ್ಲಿ ಬ್ರಹ್ಮಾಂಡವನ್ನೇ ನುಂಗಿ ಅರಗಿಸಿಕೊಂಡವನಿವನು ಎಂದು ಅವಳಿಗೇನು ಗೊತ್ತು? ಶ್ರೀಕೃಷ್ಣ ಮತ್ತೆ ಕೇಳಿದ, "ನಿದ್ರೆ ಎಂದರೇನಮ್ಮಾ?" ಯಶೋದೆ, "ನಿದ್ರೆ ಎಂದರೆ ಕಣ್ಮುಚ್ಚಿ ಪರಮಾತ್ಮನನ್ನು ಆಲಂಗಿಸಿಕೊಳ್ಳುವುದು" ಎನ್ನುತ್ತಾಳೆ. ಶ್ರೀಕೃಷ್ಣನು ತನ್ನನ್ನೇ ತಾನು ಆಲಂಗಿಸಿಕೊಂಡನಂತೆ. ಶ್ರೀಕೃಷ್ಣನು ತನ್ನನ್ನೇ ತಾನು ಆಲಂಗಿಸಿ ಕೊಂಚ ಕಾಲ ಕಣ್ಮುಚ್ಚಿ, ಬಳಿಕ ಕಣ್ಣು ತೆರೆದು, "ಅಮ್ಮ ನಿದ್ರೆ ಆಯಿತು. ತಿಂದ ಹಾಲು ಬೆಣ್ಣೆ ಕರಗಿತು. ನನಗೆ ಹಸಿವಾಗಿದೆ. ಇನ್ನೂ ಸ್ವಲ್ಪ ಬೆಣ್ಣೆ ಕೊಡು" ಎನ್ನುತ್ತಾನೆ.

ಯಶೋದೆಯು, "ಕಂದಾ! ರಂಗ, ರಂಗಯ್ಯಾ, ದೇವರು ನಿನ್ನ ಹಾಗಲ್ಲಾ. ಅವನು ಕ್ಷೀರಸಾಗರವನ್ನೇ ತೊಟ್ಟಿಲಾಗಿಸಿಕೊಂಡು ಶ್ರೀಶೇಷದೇವರನ್ನು ಹಾಸಿಗೆಯಾಗಿಸಿಕೊಂಡು ಮಲಗಿ ಚೆನ್ನಾಗಿ ನಿದ್ರೆ ಮಾಡುತ್ತಾನೆ. ಅವನು ನಿನಗೂ ಒಂದಿಷ್ಟು ನಿದ್ರೆ ಕೊಡಲಿ ಎಂದು ಅವನನ್ನು ಬೇಡುತ್ತೇನೆ" ಎನ್ನುತ್ತಾಳೆ. ಆಗ ಶ್ರೀಕೃಷ್ಣನು, "ಅಮ್ಮಾ! ದೇವರು ಚೆನ್ನಾಗಿ ನಿದ್ರೆ ಮಾಡುತ್ತಾನಾದರೆ, ನಿನ್ನ ಪ್ರಾರ್ಥನೆಯನ್ನು ಅವನು ಹೇಗೆ ಕೇಳಿಸಿಕೊಳ್ಳುತ್ತಾನೆ?" ಎಂದಾಗ, ಯಶೋದೆ ತನ್ನ ಅಜ್ಞಾನಕ್ಕೆ ತಾನೇ ನಾಚಿದಳಂತೆ. ✪

---

**ಚಿಂತನ ಪ್ರಭ**

**ಆಗಸ್ಟ್ ೧೫**

ನಮಗೆ ಸ್ವಾತಂತ್ರ್ಯ ಬಂದ ಶುಭಸಂದರ್ಭದಲ್ಲಿ ಶ್ರೀ ಡಿ.ವಿ.ಜಿ. ಒಂದು 'ಅಭಿನಂದನಸ್ತವ' ವನ್ನು ಹಾಡಿದರು. ಅದರ ಆರಂಭದ ಪದ್ಯ ಹೀಗಿದೆ: " ಶ್ರೀರಸ್ತು, ಸ್ವಸ್ತಿ, ಮಾತೇ! ಜಗದಖಿಲಹಿತೇ! ದಿವ್ಯತೇಜೋವಿಭೂತೇ! ಪೌರಾಣೀ! ಪುಣ್ಯವಾಣೀ! ಬಹುಕುಲಜನನೀ! ಬ್ರಹ್ಮವಿಜ್ಞಾನದಾನೀ! ಪಾರಕ್ಯಾಕ್ರಾಂತಿ ಈಗಳ್ ಪರಿದುದು. ಗೆಲಿದೌ ಭಾರತೀ! ರಾಜ್ಞಿಯಾಗೀ ಸ್ವೈರ ಅಧೀಶಿತ್ವ ಸಿಂಹಾಸನದಿ ವಿಜಯಿಸೌ ಧರ್ಮದೀಕ್ಷಾಪ್ರಶಸ್ತೇ!" ಪುರಾತನವಾದ ಈ ಪುಣ್ಯಭೂಮಿ ಯಾರು ಇಲ್ಲಿಗೆ ಬಂದರೂ ಅವರನ್ನೆಲ್ಲ ತಾಯಿಯಂತೆ ಸಲಹಿ, ಅವರಿಗೆ ಬ್ರಹ್ಮಜ್ಞಾನವನ್ನು ದಾನಮಾಡಿತು. ಯಾರ ಪಾಪವೋ, ಯಾರ ಶಾಪವೋ, ಅಖಿಲ ಜಗತ್ತಿನ ಹಿತಚಿಂತನೆ ಮಾಡುತ್ತಿದ್ದ ಈ ದೇಶ ಪರಕೀಯರ ಆಕ್ರಮಣಕ್ಕೆ ಸಿಕ್ಕಿತು. ಈಗ ಆ ಆಕ್ರಮಣ ಹೋಯಿತು. "ಸಂಭಾವ್ಯಂ ಜಗಕೆ ಈ ನಿರಸ್ತ್ರರಣಜೈತ್ರಂ ಭಾರತೀಸಾಧಿತಂ." ಭಾರತವು ಸಾಧಿಸಿದ ಈ ಜಯವು ರಕ್ತಪಾತವಿಲ್ಲದೆ ಸಂಪಾದನೆಯಾದದ್ದು. ಇದನ್ನು ನೋಡಿ ಲೋಕ ಪಾಠಕಲಿಯಬೇಕಾಗಿದೆ. ಈಗ "ಜನತಾರಾಜ್ಯಂ ಅಭೂತಪೂರ್ವಸುಕೃತಂ ತಾನ್ ಇಂದು ಸಂದಿರ್ಪುದೌ"; ಪ್ರಜೆಗಳು ತಮ್ಮನ್ನು ತಾವೇ ಆಳಿಕೊಳ್ಳುವ ಪುಣ್ಯವನ್ನು ಈ ದೇಶ ಹಿಂದೆ ಎಂದೂ ತಾನು ಕಂಡಿರಲಿಲ್ಲ. "ಜನನೀ! ನೀನ್ ನಿಲ್ವವೋಲ್ ಕರುಣಿಸಾ ಚೈತನ್ಯನೈರ್ಮಲ್ಯಮಂ"; ಸ್ವಾತಂತ್ರ್ಯ ಬಂದದ್ದು ದೊಡ್ಡದಲ್ಲ, ಅದನ್ನು ಉಳಿಸಿಕೊಳ್ಳುವುದು ದೊಡ್ಡದು. ಅದು ಆಗಬೇಕಾದರೆ, ಅದಕ್ಕೆ ನಿರ್ಮಲವಾದ ಚೈತನ್ಯ ಅತ್ಯವಶ್ಯ. ಅದು ಉಂಟಾಗುವಂತೆ ತಾಯಿ ಹರಸಬೇಕು. ಆಕೆಯ ಹರಕೆಗೆ ನಾವು ಪಾತ್ರರಾಗಬೇಕು. ಧರ್ಮದ ದೀಕ್ಷೆಯನ್ನು ನಾವು ವಹಿಸುವವರೆಗೂ ನಮಗೆ ಪಾತ್ರತ್ವ ಆಗದು. ಪ್ರತಿ ವರ್ಷದ ಆಗಸ್ಟ್ ೧೫ ನಮಗೆ ಆತ್ಮಪರೀಕ್ಷೆಯ ದಿನ, ದೀಕ್ಷಾಗ್ರಹಣದ ದಿನ ಆಗಬೇಕು.

– ಜಿ.ಪಿ. ರಾಜರತ್ನಂ (ವಿಚಾರರಶ್ಮಿ)